ವನ ಸಮಿತಿಯು ತನ್ನ ವರದಿಯನ್ನು ನೀಡಲು 1994ರ ಏಪ್ರಿಲ್ ತಿಂಗಳ ಅಂತ್ಯದವರೆಗೆ ಕಾಲಾವಕಾಶ ನೀಡಬೇಕು."

ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಅಂಗೀಕಾರವಾಗಿದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನಿನ್ನೆ ದಿವಸ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಿದ್ದೆವು. ಇವತ್ತು ಉತ್ತರ ಕೊಡಿಸುತ್ತೇವೆಂದು ಹೇಳಿದ್ದೀರಿ. ಅದರಂತೆ ತಾವು ಉತ್ತರ ಕೊಡಿಸಬೇಕು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

(1) ಮುಧೋಳದಲ್ಲಿ ರೈತರಿಗೆ ಆಗುತ್ತಿರುವ ತೊಂದರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಕಳೆದ ಮೂರು ದಿನದಿಂದ ಮುಧೋಳದಲ್ಲಿ ರೈತರಿಗೆ ಆಗುತ್ತಿರುವ ತೊಂದರೆ ಬಗ್ಗೆ ಕಬ್ಬು ಬೆಳೆಗಾರರ ಬಗ್ಗೆ ಪ್ರಸ್ತಾಪವನ್ನು ಈ ಸದನದಲ್ಲಿ ಮಾಡುತ್ತಿದ್ದೇವೆ. ಸಕ್ಕರೆ ಇಲಾಖಾ ಮಂತ್ರಿಗಳಾದ ಲಮಾಣಿಯವರು ಹೇಳಿಕೆ ಕೊಡುತ್ತೇನೆಂದು ಗುರುವಾರ ಆಶ್ವಾಸನೆ ಕೊಟ್ಟು ಹೋದರು. ಈಗ ಅವರು ನಾಪತ್ತೆ ಆಗಿದ್ದಾರೆ. ರೈತರಿಗೆ ತೊಂದರೆಯಾಗಿದೆ ಎಂದು ನಾವು ಹೇಳಿದ್ದೇವೆ. ಮುಧೋಳ ಮತ್ತು ಅದರ ಸುತ್ತಮುತ್ತ ಇರತಕ್ಕಂತಹ ರೈತರಿಗೆ ಬಹಳ ತೊಂದರೆಯಾಗಿದೆ. ಅಲ್ಲಿ ಕಬ್ಬು ಸಾಗಿಸುವುದಕ್ಕೆ ಪೊಲೀಸರು ಅಡ್ಡಿ ಬಂದು ಅವರನ್ನು ನಿಲ್ಲಿಸಿದ್ದಾರೆ. ಎಷ್ಟೊಂದು ಕಬ್ಬನ್ನು ಸುಟ್ಟು ಹಾಕಿದ್ದಾರೆಂಬುದರ ವಿವರವನ್ನು ತಮಗೆ ಕಳಿಸಿ ಕೊಡುತ್ತೇನೆ. ಲಾರಿ ಗಟ್ಟಲೆ ಕಬ್ಬನ್ನು ಬೆಂಕಿಗೆ ಹಾಕಿದ್ದಾರೆ. ಹೊರರಾಜ್ಯಗಳಿಗೆ ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ ಎಂದು ಒಪ್ಪಿದ್ದರು.

ಆದರೆ ಸೂಚನೆ ಹೋಗದೆ ರೈತರಿಗೆ ಬಹಳ ತೊಂದರೆಯಾಗಿದೆ. ಕತಾವು ಆಗಿರತಕ್ಕ ಕಬ್ಬು ಬಹಳವಾಗಿ ಬಾಕಿ ಇದೆ. ಇದರ ಬಗ್ಗೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇವತ್ತೇ ಸಾಯಂಕಾಲ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದರು. ಜಿಲ್ಲಾಧಿಕಾರಿಗಳಿಗೆ ಮತ್ತು ಸಕ್ಕರೆ ನಿರ್ದೇಶಕರ ಜೊತೆ ಮಾತನಾಡುತ್ತೇನೆಂದು ಹೇಳಿದ್ದರು. ಆದರೆ ಇದುವರೆಗೆ ಏನೂ ಕ್ರಮವನ್ನು ತೆಗೆದೆಕೊಂಡಿಲ್ಲ. ಅವರೂ ಸಹ ಸಿಗುತ್ತಿಲ್ಲ.

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಮತ್ತ್ತು ಸಂಸದೀಯ ವ್ಯವಹಾರಗಳ ಸಚಿವರು) : ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿನ್ನೆಯೂ ತಾವು ಇದೇ ಉತ್ತರವನ್ನು ಕೊಟ್ಟಿದ್ದೀರಿ. ತಾವು ಸಂಸದೀಯ ವ್ಯವಹಾರದ ಮಂತ್ರಿಗಳು ಇವತ್ತು ಸಾಯಂಕಾಲದೊಳಗೆ ಉತ್ತರವನ್ನು ಕೊಡಿಸುತ್ತೇನೆಂದು ನಿನ್ನೆ ಹೇಳಿದ್ದಿರಿ. ನಾವು ನಿಮಗೇನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ನಿಮಗೆ 186 ಜನರ ಬೆಂಬಲವಿದೆ. ನಿನ್ನೆ ತಾವು ಸಂಜೆ 5 ಗಂಟೆಯೊಳಗೆ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದಿರಿ, ಇವತ್ತು ಸಹ ಅದನ್ನೇ ಹೇಳುತ್ತೀರಿ; ನಾವು ಸುಮ್ಮನೆ ಕೇಳಿಕೊಂಡು ಹೋಗಬೇಕಾಗಿದೆ.

ಶ್ರೀ ಹಾರನಳ್ಳಿ ರಾಮಸ್ವಾಮಿ : ನಿನ್ನೆ ಸಂಜೆ ಸಭೆಯು ತಕ್ಷಣ ಮುಕ್ತಾಯವಾಯಿತು. ನಿನ್ನೆ ಸಭೆಯು 7-8 ಗಂಟೆಯವರೆಗೆ ನಡೆಯುತ್ತದೆ. ನಮ್ಮ ಎಲ್ಲಾ ವಿಧೇಯಕಗಳನ್ನು ಪಾಸ್ ಮಾಡಬಹುದೆಂದು ತಿಳಿದುಕೊಂಡಿದ್ದೆವು. ಆಷ್ಟೊತ್ತಿಗೆ ಸಭೆ ತಕ್ಷಣವಾಗಿ ಮುಕ್ತಾಯವಾಯಿತು. ಮಾನ್ಯ ಸಕ್ಕರೆ ಸಚಿವರು ಇವತ್ತು ಬಂದಿದ್ದಾರೆ. ಅವರು ಈಗ ಮೇಲ್ಮನೆಯಲ್ಲಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಸಭೆಯನ್ನು ಯಾವಾಗ ಮುಂದಕ್ಕೆ ಹಾಕುತ್ತೀರೆಂದು ನಮಗೆ ಗೊತ್ತೇ ಆಗುವುದಿಲ್ಲ. ಇದ್ದಕ್ಕಿದ್ದಂತೆ ಮುಂದಕ್ಕೆ ಹಾಕುತ್ತೀರಿ. ನಾವು ಅಧ್ಯಕ್ಷರನ್ನೇನು ಮಾಡೋಣ. ಅವರ ಗತಿ ಅಪರಿಸ್ಥಿತಿಯಾಗಿದೆ. ನಾವು ರಾತ್ರಿ ಎಂಟು ಗಂಟೆಯವರೆಗೆ ಬೇಕಾದರೆ ಕುಳಿತುಕೊಳ್ಳಲು ತಯಾರಾಗಿದ್ದೇವು.

ಶ್ರೀ ಹಾರನಳ್ಳಿರಾಮಸ್ವಾಮಿ : ಅಪ್ಪಣೆ ಬಹಳ ಸಂತೋಷ. ತಮಗೆ ಧನ್ಯವಾದಗಳು.

(2)ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ತೊಗರಿ ಬೆಳೆಯು ನಾಶವಾದಂತಹ ರೈತರಿಗೆ ಪರಿಹಾರ.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ನಾನು ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೆ. ಅದೇನೆಂದರೆ ಗುಲ್ಬರ್ಗ ಜಿಲ್ಲೆಯ ಜೇವರ್ಗಿ ರತಾಲ್ಲೂಕಿನಲ್ಲಿ ತೊಗರಿ ಬೆಳೆಯು ನಾಶವಾದಂಥ ರೈತರಿಗೆ ಪರಿಹಾರವನ್ನು ಕೊಟ್ಟಿಲ್ಲವೆಂದು ರೈತರು ಕಳೆದ ಒಂದು ವಾರದಿಂದ ಅಮರಣಾಂತ ಉಪವಾಸವನ್ನು ಮಾಡುತ್ತಿದ್ದಾರೆ. ಈಗಾಗಲೇ 5 ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ತಾವು ತುಂಬ ಧಾರಾಳದಿಂದ ತೊಗರಿ ಬೆಳೆಯು ನಾಶವಾಗಿದ್ದಕ್ಕೆ ಪರಿಹಾರವನ್ನು ಕೊಟ್ಟಿರಿ. ನಾನೇನು ಪರಿಹಾರವನ್ನು ಕೊಟ್ಟಿಲ್ಲವೆಂದು ಹೇಳುವುದಿಲ್ಲ. ತಾವು ಇನ್ನೂ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆಯೆಂದು ಹೇಳಿದ್ದೀರಿ. ಕೆಲವರಿಗೆ ಚೆಕ್ ಕೊಟ್ಟಿದ್ದಕ್ಕೆ ಆನರ್ ಆಗಿದೆ, ಇನ್ನು ಒಂದು ಕೋಟಿ ರೂಪಾಯಿಗಳಷ್ಟು ಚೆಕ್ ಆನರ್ ಆಗಿಲ್ಲ. ಮಾನ್ಯ ಕೃಷಿ ಸಚಿವರು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಅದರ ಕಡೆಗೆ ಹಣವನ್ನು ಬಿಡುಗಡೆ ಮಾಡಿ ಅದನ್ನು ಆನರ್ ಆಗುವಂತೆ ನೋಡಿಕೊಳ್ಳುತ್ತೇವೆಂದು ಹೇಳಿದ್ದರು. ಆದರೆ ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ತೊಗರಿ ಬೆಳೆಯು ನಾಶವಾಗಿರುವಂಥವರಿಗೆ ಶೇಕಡ 5 ರಷ್ಟು ಜನರಿಗೆ ಸಹ ಪರಿಹಾರ ಸಿಗದೇ ಇರುವುದರಿಂದ ಕಳೆದ ಒಂದು ವಾರದಿಂದ ಅಲ್ಲಿ ಅಮರಣಾಂತ ಉಪವಾಸವನ್ನು ಮಾಡುತ್ತಿದ್ದಾರೆ. 5-6 ಜನರು ಈಗಾಗಲೇ ಆಸ್ಪತ್ರೆಗೆ ಸೇರಿದ್ದಾರೆ. ಆದ್ದರಿಂದ ನಾನು ದಯಮಾಡಿ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಅಲ್ಲಿ ಉಪವಾಸ ನಿಲ್ಲುವ ವ್ಯವಸ್ಥೆ ಮಾಡಬೇಕು ಮತ್ತು ತೊಗರಿ ಬೆಳೆ ನಾಶವಾದಂಥವರಿಗೆ ಪರಿಹಾರವನ್ನು ಕೊಡಲು ಇವತ್ತಿನಿಂದಲೇ ಹಣವನ್ನು ಬಿಡುಗಡೆ ಮಾಡಬೇಕು. ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿ ಚೆಕ್ಗಳನ್ನು ಕೊಟ್ಟಿದ್ದಾರೆ. ಆದರೆ ಆ ಚೆಕ್ಗಳು ಆನರ್ ಆಗಿಲ್ಲ. ಅದರ ಬಗ್ಗೆ ಸದನದಲ್ಲಿ ಅನೇಕ ಬಾರಿ ಪ್ರಸ್ತಾಪ ಮಾಡಿದ್ದೇವೆ. ಸಂಬಂಧಪಟ್ಟ ಸಚಿವರು ಸಹ ಅದರ ಕಡೆಗೆ ಗಮನಕೊಡುತ್ತೇವೆಂದು ಹೇಳಿದ್ದರು. ತಾವೂ ಕೂಡ ಅದರ ಬಗ್ಗೆ ಗಮನ ಕೊಡುತ್ತೀನೆಂದು ಹೇಳಿದ್ದೀರಿ. ಆದ್ದರಿಂದ ಮೊದಲು ಜೇವರ್ಗಿ ತಾಲ್ಲೂಕಿಗೆ ಹಣವನ್ನು ಬಿಡುಗಡೆ ಮಾಡಿ, ತೊಗರಿ ಬೆಳೆ ನಾಶವಾದಂಥವರಿಗೆ ಪರಿಹಾರವನ್ನು ಒದಗಿಸಿಕೊಡಬೇಕು ಮತ್ತು ಚೆಕ್ ಆನರ್ ಆಗದೇ ಇರತಕ್ಕಪರಿಗೆ ತಕ್ಷಣ ಆ ಚೆಕ್ನ್ನು ಪ್ರಜೆಂಟ್ ಮಾಡಿಸಿ ಅದು ಆನರ್ ಆಗುವಂತೆ ನೋಡಿಕೊಳ್ಳತಕ್ಕದ್ದು, ಮತ್ತು ತಾವೇ ಆ ಸದನದಲ್ಲಿ ಭರವಸೆಯನ್ನು ಕೊಟ್ಟಿರುವ ಪ್ರಕಾರ ಉಳಿದ ಎರಡು ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಿ ಅಲ್ಲಿ ಅಮರಣಾಂತ ಉಪವಾಸ ನಿಲ್ಲುವಂತಹ ವ್ಯವಸ್ಥೆಯನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಅನುಭವಕ್ಕೆ ಬಂದಾಗ ನಾನು ಕೂಡ ಗುಲ್ಬರ್ಗ ಜಿಲ್ಲೆಯಲ್ಲಿ ಸಮೀಕ್ಷೆಯನ್ನು ನಡೆಸಿದಾಗ, ನಾವು ಈಗಾಗಲೇ ಸುಮಾರು 10ಕೋಟಿ ರೂಪಾಯಿಗಳನ್ನು ತೊಗರಿ ಬೆಳೆಯ ನಾಶಕ್ಕಾಗಿ ಪರಿಹಾರವನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ಸುಮಾರು 40 ಲಕ್ಷ ರೂಪಾಯಿ ಏನು ಅಲ್ಲಿಯ ಚೆಕ್ಗಳು ಆನರ್ ಆಗಿಲ್ಲ ಅದನ್ನು ನನ್ನ ನೆನಪಿನ